ಹಿಂದೂಗಳಾಗಲಿ-ಮುಸ್ಲಿಮರಾಗಲಿ ಎಲ್ಲರೂ ಉರ್ದು ಕಲಿಯಬೇಕಾಗಿತ್ತು. ಅಲ್ಲಲ್ಲಿ ಕನ್ನಡ ಕ್ವಚಿತ್ತಾಗಿ ಒಂದು ವಿಷಯವಾಗಿ ಓದಿಸುತ್ತಿದ್ದರು. ಕೆಲವರು ಹೊರಗಡೆ ಉರ್ದು ಬೋರ್ಡ್ ಹಾಕಿ ಒಳಗಡೆ ಕನ್ನಡ ಮಿಡಿಯಮ್ ಬೋಧಿಸುತ್ತಿದ್ದರು. ಅದಿರಲಿ, ಅದೇ ಕಾಲದಲ್ಲಿ ಯುಸೂಫ್ ಹುಸೇನ್ ಅನ್ನುವ ಉರ್ದು ಮಾಸ್ತರ್ ಇದ್ದರು. ಹಿಂದೂ-ಮುಸ್ಲಿಂ ವಿದ್ಯಾರ್ಥಿಗಳಲ್ಲಿ ಭೇದ ಭಾವ ಮಾಡದೆ ಪಾಠ ಮಾಡುತ್ತಿದ್ದರು. ಅವರ ಪ್ರಿಯ ವಿದ್ಯಾರ್ಥಿಗಳಲ್ಲಿ ಪ್ರಭುರಾವ್ ಒಬ್ಬರು. ಮುಲ್ಕಿ ಪರೀಕ್ಷೆ ಬರಿಬೇಕಾದ್ರೆ ಕಲಬುರ್ಗಿಗೆ ಹೋಗಬೇಕಾಗುತ್ತಿತ್ತು. ಅಂತಹದರಲ್ಲಿ ಪ್ರಭುರಾವ್ ಮ್ಯಾಟ್ರಿಕ್ ಪರೀಕ್ಷೆ ಬರೆದ, ಪರೀಕ್ಷೆ ಫಲಿತಾಂಶ ಕೂಡ ಬಂದಿತು. ಫಲಿತಾಂಶ ನೋಡಿ ಯುಸೂಫ್ ಹುಸೇನ್ ಅವರ ಎದಿ ಧಸಕ್ ಎಂದಿತು, ಗಾಬರಿಗೊಂಡರು. ಬೋರ್ಡಿಗೆ ಪ್ರಥಮ ಶ್ರೇಣಿಯಲ್ಲಿ ಮುಸ್ಲಿಂ ಹುಡುಗ ಪಾಸಾಗಿದ್ದ. ಆದರೆ ಪ್ರಭುರಾವ್ ಮುಸ್ಲಿಂ ಹುಡುಗನಕ್ಕಿಂತ ಮಾರ್ಕ್ಸ್ ಕಡಿಮೆ ತಗೊಂಡಿದ್ದ. ಇದು ಅನ್ಯಾಯ, ಪ್ರಭುರಾವ್ ಪ್ರಥಮ ಶ್ರೇಣಿಯಲ್ಲಿ ಪಾಸಾಗಬೇಕಿತ್ತು. ಹಿಂಗ್ಯಾಕಾತು? ಎಂದು ಯುಸೂಫ್ ಹುಸೇನರು ನಮಾಜಿಗೆ ಹೋದಲ್ಲಿ, 'ನೋಡ್ರಿ, ಮ್ಯಾಟ್ರಿಕ್ ಪರೀಕ್ಷೆ ಫಲಿತಾಂಶ ಬಂದದ, ಆದರ ಆ ಫಲಿತಾಂಶ ನನಗ ತೃಪ್ತಿ ತಂದಿಲ್ಲ' ಎಂದು ಗೆಳೆಯರಿಗೆ ಹೇಳಿದರು. 'ಯಾಕರಿ ಏನಾಗ್ಯಾದ, ಎರಡ ಮೂರು ದಿವಸಾತು ಚಿಂತಿಯೊಳಗದ್ದೀರಿ ಕಾರಣ ಏನು?' ಎಂದು ಕೇಳಿದರು. 'ನಮ್ಮ ಸಾಲಿ ಹುಡುಗ ಪ್ರಭುರಾವ್ ಉರ್ದುನಲ್ಲಿ ತುಂಬಾ ಜಾಣ. ರ್‍ಯಾಂಕ್ ಅವನಿಗಿ ಬರಬೇಕು. ಆದ್ರ ಒಬ್ಬ ಜಾಣನಲ್ಲದ, ಜ್ಞಾನದಲ್ಲಿ ಅವನಿಗಿಂತ ಹಿಂದಿರುವ ಮುಸ್ಲಿಂ ಹುಡುಗಗ ರ್‍ಯಾಂಕ್ ಕೊಟ್ಟಾರ' ಎಂದು ಯುಸೂಫ್ ಮಾಸ್ತರ್ ಹೇಳಿದ. ಮುಸ್ಲಿಂ ಹುಡುಗ ಬಂದಿದ್ದಾನೆ ಅಂದ್ರ ನೀವು ಖುಷಿ ಪಡಬೇಕು, ಬಿಟ್ಟು ದುಃಖದಲ್ಲಿದೀರಲ್ಲ' ಎಂದು ಎಲ್ಲರೂ ಅಲ್ಲಗಳೆದರು. ಇಲ್ರಿ ಪ್ರಭುರಾವ್ ರ್‍ಯಾಂಕ್ ಬರಕೇಬೇಕ್ರಿ. ನೀವೆಲ್ಲ ವಂತಿಗೆ ಸಂಗ್ರಹಿಸಿಕೊಟ್ಟರ ಯಾದಗೀರವರೆಗೆ ಟಾಂಗಾದಾಗ ಹೋಗಿ, ಮುಂದ ರೈಲು ಹತ್ತಿ ಹೈದ್ರಾಬಾದ ಬೋರ್ಡಿಗಿ ಹೋಗಿ ಕೇಳಿ ಬರ್‍ತಿನಿ' ಎಂದು ವಿನಂತಿಸಿದರು. ಅವರ ವಿನಂತಿಗೆ ಯಾರೂ ಕವಡಿ ಕಿಮ್ಮತ್ತು ಕೊಡಲಿಲ್ಲ. ಸ್ವಾಭಿಮಾನಿ ಯುಸೂಫ್ ಛಲ ಬಿಡದೆ ಪ್ರಭುರಾವ್‌ಗೆ ಅನ್ಯಾಯವಾಗಿದೆ, ನ್ಯಾಯ ದೊರಕಿಸಿಕೊಡಲೇಬೇಕೆಂದು ಹೈದ್ರಾಬಾದ್‌ಗೆ ಹೋಗಲು ನಿರ್ಧರಿಸಿ ಸ್ವತಃ ಅಡುಗೆ ಮಾಡಿ ಬುತ್ತಿಕಟ್ಟಿಕೊಂಡು ಯಾದಗೀರವರೆಗೆ ನಡದೇ ಹೋದರು. ಕೆಲ ಮುಸ್ಲಿಂ ಶಿಕ್ಷಕರು, 'ಈ ಯುಸೂಫ್‌ಗ ಹುಚ್ಚ ಹಿಡದದೇನ ನೋಡ್ರಿ. ವ್ಯರ್ಥ ಪ್ರಯತ್ನ ಮಾಡಾಕತ್ಯಾನ' ಎಂದು ನಕ್ಕರು.

ಹಟ ಬಿಡದ ಯುಸೂಫ್ ಮಾಸ್ತರ್ ಮ್ಯಾಟ್ರಿಕ್ ಬೋರ್ಡಿನ ಅಧಿಕಾರಿಗಳಿಗೆ ಭೇಟಿಯಾಗಿ ಪ್ರಭುರಾವ್‌ನ ವಿದ್ವತ್ತಿನ ಬಗ್ಗೆ ಹೇಳಿದ. ಅಲ್ಲಿಯ ಅಧಿಕಾರಿಗಳು ಸಹ, 'ಹೋಗಲಿ ಬಿಟ್ಟ್ ಬಿಡ್ರಿ' ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. 'ನೀವು ನ್ಯಾಯ ಕೊಡದಿದ್ದರೆ ನಾನು ನಿಜಾಮರನ್ನು ಭೇಟಿಯಾಗಿ ಕಂಪ್ಲೇಂಟ್ ಮಾಡುತ್ತೇನೆ, ಮರು ಮೌಲ್ಯಮಾಪನಕ್ಕೆ ವಿನಂತಿಸುತ್ತೇನೆ' ಎನ್ನುತ್ತಿದ್ದಂತೆ ಅಧಿಕಾರಿಗಳು ಹೆದರಿ ನಿಜವಾದ ಅಂಕಗಳ ಪಟ್ಟಿ ಬಿಡುಗಡೆ ಮಾಡಿ ಪ್ರಭುರಾವ್‌ನನ್ನು ಪ್ರಥಮ ರ್‍ಯಾಂಕ್ ವಿದ್ಯಾರ್ಥಿ ಎಂದು ಘೋಷಿಸಿದರು. ಪ್ರಯತ್ನಕ್ಕೆ ಫಲ ನಿಶ್ಚಿತ ಅಂತಾರಲ್ಲ ಹಂಗ ಯಶಸ್ಸು ಪಡೆದ ಯುಸೂಫ್ ಮಾಸ್ತರ್ ಸುರಪುರಕ್ಕೆ ಮರಳಿದರು. ಧರ್ಮ-ಜಾತಿ ಮೀರಿ ಸತ್ಯದ, ನ್ಯಾಯದ ಪರವಾಗಿರುವವರೇ ಶಿಕ್ಷಕರು. ನಿಜವಾದ ಶಿಕ್ಷಕ ಅಂದ್ರೆ ಯುಸೂಫ್ ಮಾಸ್ತರ್" ಎಂದು ಪ್ರೊಫೆಸರ್ ಪ್ರಕಾಶ ಹೇಳುತ್ತಿದ್ದಂತೆ ವಿದ್ಯಾರ್ಥಿಗಳೆಲ್ಲ ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.



'ದಿನಗಳು ಉರುಳಿದವು, ಯುಸೂಫ್ ಮಾಸ್ತರ್ ನಿಧನ ಹೊಂದಿದರು. ಅವರ ವಿದ್ಯಾರ್ಥಿ ಬಳಗ ದುಃಖತಪ್ತವಾಯಿತು. ಪ್ರಭುರಾವ್ ದುಃಖಿಸಿದ, ದುಃಖಿಸುತ್ತ ಸುಮ್ಮನೆ ಕೂಡಲಿಲ್ಲ. ಮೌಲ್ವಿಗಳ ಹತ್ತಿರ ಹೋಗಿ, 'ನೋಡ್ರಿ ನೀವು ಒಪ್ಪುವುದಾದರೆ ನನ್ನ ಗುರುಗಳ ಅಂತಿಮ ಕ್ರಿಯಾ ಕರ್ಮಗಳನ್ನು ಖುದ್ದು ನಾನೇ ಮಾಡಬೇಕೆಂದಿದ್ದೇನೆ ದಯಮಾಡಿ ನನಗೆ